# ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದಾಂಡೇಲಿ

## ಕ್ರಿಮೀನಲ್ ಮೊಕದ್ದಮೆ ನಂ. 220/2018.

**ಚಾಸಾ- 04**

**ಪ್ರಾಸಾ-03**

**ದಿನಾಂಕಃ 26-09-2025 ರಂದು ಸತ್ಯ ಪ್ರತಿಜ್ಞೆ ಮೇಲೆ ಸಾಕ್ಷಿಗೆ ಪ್ರಮಾಣ ವಚನವನ್ನು ಭೋಧಿಸಲಾಯಿತು .**

| | | |
|---|---|---|
| ಹೆಸರು | : | ಕೆ.ಆರ್.ಕೆ ಪ್ರಭು ತಂಃ ಎಸ್ ಕಣ್ಣನ್ |
| ವಯಸ್ಸು | : | 66 ವರ್ಷ |
| ಉದ್ಯೋಗ | : | ನಿವೃತ್ತ ಅಬಕಾರಿ ಉಪನಿರೀಕ್ಷಕರು, ಅನಮೊಡ |
| ವಾಸ | : | ಬೆಂಗಳೂರು. |

**<u>ಮುಂದುವರೆದ ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದ.</u>**

1. ನಾನು ಮಾರ್ಚ್-2018 ರಿಂದ ನವೆಂಬರ್-2018 ರವರೆಗೆ ಅನಮೋಡ ತನಿಖಾ ಠಾಣೆಯಲ್ಲಿ ಅಬಕಾರಿ ಉಪನಿರೀಕ್ಷಕರು ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 10-08-2018 ರಂದು ಚಾಸಾ-1 ರಿಂದ ಸದರಿ ಪ್ರಕರಣದ ಕಡತವನ್ನು ಪಡೆದುಕೊಂಡು, ಕಡತದಲಿದ್ದ ರಾಸಾಯನಿಕ ಪರೀಕ್ಷಾ ವರದಿ, ಸಾಕ್ಷಿದಾರರ ಹೇಳಿಕೆಗಳನ್ನು ಮತ್ತು ಪ್ರ.ವ.ವರದಿಯನ್ನು ಮತ್ತು ಇನ್ನುಳಿದ ಎಲ್ಲಾ ದಾಖಲೆಗಳನ್ನು ಪಡೆದು ಪರಿಶೀಲನೆ ಮಾಡಿರುತ್ತೇನೆ. ತದನಂತರ ದಿಃ 20-08-2018 ರಂದು ತನಿಖೆಯನ್ನು ಪೂರ್ಣಗೊಳಿಸಿ, ಆರೋಪಿಯ ವಿರುದ್ದ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡು ಬಂದ ಕಾರಣ, ಆತನ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

3. ಸಾಕ್ಷಿಯು ಈಗ ನ್ಯಾಯಾಲಯದ ಮುಂದೆ ಇರುವ 750 ಎಂ.ಎಲ್ ಎರಡು ಗಾಜಿನ ಮತ್ತು 2 ಪ್ಲಾಸ್ಟಿಕ್ ಬಾಟಲಿಗಳು ಮತ್ತು 180 ಎಂ.ಎಲ್ ಎರಡು ಗಾಜಿನ ಬಾಟಲಿಗಳು,

500 ಎಂ.ಎಲ್ ನ ಎರಡು ಟಿನ್ ಗಳ ನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮುದ್ದೆ ಮಾಲು-1 ರಿಂದ 8 ಎಂದು ಗುರುತಿಸಲಾಗಿರುತ್ತದೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ವಿ.ಎಸ್.ಜಿ ವಕೀಲರಿಂದ</u>

4. ಮು.ಮಾ-1 ರಿಂದ 7 ಬಾಟಲಿಗಳ ಮೇಲೆ ಹಚ್ಚಿದ ಚೀಟಿಯ ಮೇಲೆ ಪ್ರಕರಣ ಸಂಖ್ಯೆ, ದಿನಾಂಕ, ಗುನ್ನಾ ಸಂಖ್ಯೆಗಳನ್ನು ತಿದ್ದಲಾಗಿದೆ ಎಂದರೆ ಸರಿ. ಜ್ಞಾನೇಶ್ವರ ಎನ್ನುವವರ ಗುರುತಿನ ಚೀಟಿಯನ್ನು ನೀವು ಏನಾದರೂ ಗಮನಿಸಿದ್ದೀರಾ ಅಥವಾ ನ್ಯಾಯಾಲಯಕ್ಕೆ ಸಲ್ಲಿಸಿದ್ದೀರಾ? ಎಂದರೆ ನಾನು ಗಮನಿಸಿಲ್ಲ ಮತ್ತು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದು ನುಡಿಯುತ್ತಾರೆ. ಶೋಧನಾ ಸಮುಚ್ಚಿತ ವಾರೆಂಟ್ ನಲ್ಲಿ ತಿದ್ದುಪಡಿಯಾಗಿದೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಚಾಸಾ-1 ರವರೇ ದಾಳಿ ಮಾಡಿದ್ದು, ಹೇಳಿಕೆಗಳನ್ನು ತೆಗದುಕೊಂಡಿದ್ದು ಹಾಗೂ ಪ್ರಕರಣ ದಾಖಲಿಸಿದ್ದು ಎಂದರೆ ಸರಿ. ಚಾಸಾ-1 ರವರು ಹಾಕಿದ ಸುಳ್ಳು ಪ್ರಕರಣಕ್ಕೆ ಬೇಕಾದ ಹಾಗೆ ಎಲ್ಲಾ ದಾಖಲೆಗಳನ್ನು ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ, ಈ ಪ್ರಕರಣದಲ್ಲಿ ಜಪ್ತುಪಡಿಸಿದ್ದೇವೆ ಎನ್ನಲಾದ ಅಕ್ರಮ ಮದ್ಯ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದೆ ಇದ್ದರೂ ಸಹ ನಮ್ಮ ಠಾಣ ಅಂಕೆ-ಅಂಶಗಳಿಗೊಸ್ಕರ ದಾಖಲೆಗಳನ್ನು ಸೃಷ್ಟಿಸಿ, ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿ, ಸುಳ್ಳು ದೋಷಾರೋಪಣ ಸಲ್ಲಿಸಿ, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-2 ಮತ್ತು 3 ರವರು ನಮ್ಮ ಠಾಣಾ ಸಿಬ್ಬಂದಿಗಳಾದ ಕಾರಣ, ಈ ಪ್ರಕರಣಕ್ಕೆ ಪೂರಕವಾಗಿ ಅವರನ್ನು ಪಂಚರನ್ನಾಗಿ ನೇಮಿಸಲಾಗಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ

ಸಹಿ ಇದೆ/-

(ತೇಜಸ್ವಿನಿ ಸೊಗಲದ)

ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.

ದಂಡಾಧಿಕಾರಿಗಳು,ದಾಂಡೇಲಿ.